## ಮಂಗಳೂರು ವಿಶ್ವವಿದ್ಯಾನಿಲಯ

**ದಿನಾಂಕ 13.10.2017 ರಂದು ಪೂರ್ವಾಹ್ನ ಗಂಟೆ 11:00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2017ನೇ ಸಾಲಿನ ಆರನೆಯ ಸಾಮಾನ್ಯ ಸಭೆಯ ನಡಾವಳಿಗಳು.**

**ಉಪಸ್ಥಿತ ಸದಸ್ಯರು**

**ಅನುಪಸ್ಥಿತ ಸದಸ್ಯರು:**

ಪ್ರಾರಂಭದಲ್ಲಿ ಮಾನ್ಯ ಕುಲಪತಿಯವರು ಎಲ್ಲಾ ಸದಸ್ಯರನ್ನು ಸಭೆಗೆ ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

### ಪ್ರಾರಂಭಿಕ

1. ಸಭೆಯು ಆರಂಭದಲ್ಲಿ, ಮಂಗಳೂರು ವಿಶ್ವವಿದ್ಯಾನಿಲಯದ ಮೈಕ್ರೋಟ್ರಾನ್ ಸೆಂಟರ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ಭೀಮ, ಟೆಕ್ನಿಕಲ್ ಅಸಿಸ್ಟೆಂಟ್/ಅಪರೇಟರ್ ಇವರು ದಿನಾಂಕ 12.10.2017ರಂದು ಅಕಾಲ ನಿಧನರಾದ ಹಿನ್ನೆಲೆಯಲ್ಲಿ ಮೃತರ ಗೌರವಾರ್ಥ ಸಂತಾಪ ಸೂಚಕವಾಗಿ ಎರಡು ನಿಮಿಷಗಳ ಮೌನ ಪ್ರಾರ್ಥನೆಯನ್ನು ಕೈಗೊಂಡು ಶ್ರದ್ಧಾಂಜಲಿಯನ್ನು ಸಲ್ಲಿಸಿತು.

2. ಪ್ರೊ.ಕೆ. ಭೈರಪ್ಪ, ಕುಲಪತಿಗಳು, ಮಂಗಳೂರು ವಿಶ್ವವಿದ್ಯಾನಿಲಯ ಇವರು ಪ್ರತಿಷ್ಠಿತ ರಾಯಲ್ ಸೊಸೈಟಿ ಆಫ್ ಕೆಮಿಸ್ಟ್ರಿ (ಎಫ್.ಆರ್.ಎಸ್.ಸಿ) ಲಂಡನ್, ಯು.ಕೆ.ಇದರ ಫೆಲೋ ಆಗಿ ಆಯ್ಕೆಯಾದುದ್ದಕ್ಕೆ ಸಿಂಡಿಕೇಟು ಸಭೆಯು ಅವರನ್ನು ಅಭಿನಂದಿಸಿತು.

3. ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜು, ಮಡಿಕೇರಿ, ಸ್ನಾತಕೋತ್ತರ ಕೇಂದ್ರ ಚಿಕ್ಕ ಅಳುವಾರ, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಈ ಎಲ್ಲಾ ಕಾಲೇಜುಗಳಲ್ಲಿ ಲೆಕ್ಕ ಪರಿಶೋಧನೆಯನ್ನು ಕೈಗೊಂಡು ವರದಿಗಳನ್ನು ತರಿಸಿಕೊಳ್ಳಲು ಅಡಳಿತಕ್ಕೆ ಸೂಚನೆ ನೀಡಿತು.

4. ಶ್ರೀ ಗುರುಕಿರಣ್, ಸಂಗೀತ ನಿರ್ದೇಶಕರು ಅವರು ವಿಶ್ವವಿದ್ಯಾನಿಲಯಕ್ಕೆ ಅದರದ್ದೇ ಆದ "ವಿಶ್ವವಿದ್ಯಾನಿಲಯ ಗೀತೆ"ಯನ್ನು ರಚಿಸಿ, ರಾಗ ಜೋಡಿಸಿ ನೀಡಿರುವುದಕ್ಕೆ ಅವರನ್ನು ಅಭಿನಂದಿಸಿ ಕುಲಪತಿಗಳು ಶ್ರೀ.ಗುರುಕಿರಣ್ ಅವರಿಗೆ ಪತ್ರ ಬರೆಯಲು ಕೋರಿಕೊಂಡಿತು. ವಿಶ್ವವಿದ್ಯಾನಿಲಯ ಗೀತೆಯನ್ನು ವಿಶ್ವವಿದ್ಯಾನಿಲಯದಲ್ಲಿ ಹಾಗೂ ಘಟಕ ಕಾಲೇಜುಗಳ ಕಾರ್ಯಕ್ರಮಗಳಲ್ಲಿ ಕಡ್ಡಾಯವಾಗಿ ಹಾಡುವುದು; ರಾಜ್ಯದ ಹಾಗೂ ರಾಷ್ಟ್ರೀಯ

ಕಾರ್ಯಕ್ರಮಗಳಲ್ಲಿ ನಾಡ ಗೀತೆ ಹಾಗೂ ವಿಶ್ವವಿದ್ಯಾನಿಲಯ ಗೀತೆ ಎರಡನ್ನೂ ಕಡ್ಡಾಯವಾಗಿ ಹಾಡುವಂತೆ ಸೂಚಿಸಿ ಸುತ್ತೋಲೆ ನೀಡಲು ಕುಲಸಚಿವರಿಗೆ ನಿರ್ದೇಶನ ನೀಡಿತು.

5. ವಿಶ್ವವಿದ್ಯಾನಿಲಯ ವಿದ್ಯಾರ್ಥಿ ಸಂಘದ ಚುನಾವಣೆಗಳಲ್ಲಿ ಭಾಗವಹಿಸಿದ ವಿವಿಧ ವಿದ್ಯಾರ್ಥಿ ಗುಂಪುಗಳಿಂದ ಆರೋಪಗಳು ಪ್ರತ್ಯಾರೋಪಗಳು ಬಂದಿರುವ ಹಿನ್ನೆಲಯಲ್ಲಿ ಲಿಂಗ್ಡೋ ಸಮಿತಿಯ ವರದಿಯನ್ನು ಕಡ್ಡಾಯವಾಗಿ ಜಾರಿಗೊಳಿಸಲು ನಿರ್ಣಯಿಸಲಾಯಿತು; ಅಲ್ಲದೆ ಚುನಾವಣಾ ಅವಧಿಯನ್ನು ಮೊಟಕುಗೊಳಿಸಿ ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶ ನೀಡದಂತೆ ಶೀಘ್ರವಾಗಿ ನಡೆಸಲು ಅನುವುವಾಗುವಂತೆ ಅಸ್ತಿತ್ವದಲ್ಲಿರುವ ವಿನಿಮಯಕ್ಕೆ ತಿದ್ದುಪಡಿಯನ್ನು ತರಲು ನಿರ್ಧರಿಸಲಾಯಿತು.

6. ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಈ ಸಂಸ್ಥೆಗೆ ಸೂಕ್ತವಾದ ಹೆಸರಿಡಲು ಸಭೆಯ ಕುಲಪತಿಗಳನ್ನು ಕೋರಿಕೊಂಡಿತು.

7. ಸಭೆಯು, ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಕ್ರೀಡಾಕೂಟಗಳಿಗೆ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಿಗೆ ಆಯ್ಕೆಯಾಗುವ ವಿದ್ಯಾರ್ಥಿಗಳು ತಮ್ಮ ಸ್ಪರ್ಧೆಯ ಸಂದರ್ಭಗಳಲ್ಲಿ ವಿಶ್ವವಿದ್ಯಾನಿಲಯದ ಸೆಮಿಸ್ಟರ್ ಪರೀಕ್ಷೆಗಳಿಗೆ ಗೈರುಹಾಜರಾದರೆ ಅಂತಹ ವಿದ್ಯಾರ್ಥಿಗಳಿಗೆ ಮರು ಪರೀಕ್ಷೆಯನ್ನು ನಡೆಸಲು ಅನುವುವಾಗುವಂತೆ ಅಸ್ತಿತ್ವದಲ್ಲಿರುವ ನಿಯಮಗಳಿಗೆ ಸೂಕ್ತ ತಿದ್ದುಪಡಿಯನ್ನು ತರಲು ನಿರ್ಣಯ ಕೈಗೊಂಡಿತು.

8. ಪ್ರಾಂಶುಪಾಲರಾದ ಡಾ. ಪಾರ್ವತಿ ಅಪ್ಪಯ್ಯ ಹಾಗೂ ಅಲ್ಲಿನ ಇತಿಹಾಸ ವಿಭಾಗದ ಉಪನ್ಯಾಸಕರಾದ ಡಾ. ಕುಮಾರಸ್ವಾಮಿ ಇವರ ಕುರಿತು ವಿದ್ಯಾರ್ಥಿಗಳ placement ಗೆ ಸಂಬಂಧಪಟ್ಟಂತೆ ನಡೆಯಲ್ಪಡುತ್ತಿರುವ ವಿಚಾರಣೆಯ ಕುರಿತು ಪ್ರಸ್ತಾಪಿಸಿತು. ಕಡ್ಡಾಯ ರಜೆಯಲ್ಲಿ ತೆರಳುವಂತೆ ವಿಶ್ವವಿದ್ಯಾನಿಲಯವು ನೀಡಿದ ಆದೇಶಕ್ಕೆ ಡಾ. ಪಾರ್ವತಿ ಅಪ್ಪಯ್ಯನವರು ಹೈಕೋರ್ಟ್‌ನಿಂದ ತಡೆಯಾಜ್ಞೆ ತಂದ ವಿಷಯವನ್ನು ಸಭೆಯು ಚರ್ಚಿಸಿತು. ವಿಶ್ವವಿದ್ಯಾನಿಲಯವು ಆ ಎರಡು ಸಿಬ್ಬಂಧಿಗಳ ವಿರುದ್ದ ವಿದ್ಯಾರ್ಥಿಗಳ placement ಕುರಿತು ನಿವೃತ್ತ ನ್ಯಾಯಾದೀಶರಿಂದ ಆದೇಶಿಸಿದ ತನಿಖೆಯು ಪ್ರಗತಿಯಲ್ಲಿದೆ ಎಂದು ಕುಲಪತಿಗಳು ಸಭೆಗೆ ಸೂಚಿಸಿದರು. ಅಲ್ಲದೆ ಕೊಡಗು ಜಿಲ್ಲೆಯ ಪೋಲೀಸ್ ಇಲಾಖೆಯೂ ವಿಚಾರಣೆ ನಡೆಸುತ್ತಿದ್ದು, ಅದರ ಅಂತಿಮ ವರದಿಯನ್ನು ವಿಶ್ವವಿದ್ಯಾನಿಲಯವು ಎದುರು ನೋಡುತ್ತಿದೆ ಎಂದು ತಿಳಿಸಿದರು.

ಈ ಹಂತದಲ್ಲಿ ಕೆಲವು ಸದಸ್ಯರು ಸದರಿ ಕಾಲೇಜಿನಲ್ಲಿ ಡಾ. ಪಾರ್ವತಿ ಅಪ್ಪಯ್ಯ ಅವರ ಅಸಾಮರ್ಥ್ಯ ಹಾಗೂ ಅದಕ್ಷ ನಾಯಕತ್ವದಿಂದಾಗಿ ಆಡಳಿತವು ಕುಸಿಯುತ್ತಿದ್ದು ವಿದ್ಯಾರ್ಥಿಗಳು ಹಾಗೂ ಬೋಧಕ, ಬೋಧಕೇತರ ಸಿಬ್ಬಂಧಿಗಳಲ್ಲಿ ಅಸಮಾಧಾನ ಹೆಚ್ಚುತ್ತಿದ್ದು ಶೈಕ್ಷಣಿಕ ವಾತಾವರಣ ಹದಗೆಡುತ್ತದೆ ಎಂಬ ಬಗ್ಗೆ ತಮಗೆ ದೂರುಗಳು ಬಂದಿರುತ್ತವೆ ಎಂದು ತಿಳಿಸಿದರು.

ಡಾ. ಪಾರ್ವತಿ ಅಪ್ಪಯ್ಯನವರು ಇದುವರೆಗೆ ಓ೦೦ಅ ಮಾನ್ಯತೆಗಾಗಿ ಖಖ (ಖಜಟಜಿ ಖಾಣಜಥಿ ಖಜಾಠಾಣ) ಇದನ್ನು ಈಗಾಗಲೇ ಸುಮಾರು ಒಂದು ವರ್ಷದಷ್ಟು ತಡವಾಗಿದ್ದರೂ ಇನ್ನೂ NAACಗೆ ಆಪ್‌ಲೋಡ್ ಮಾಡದೆ ಇರುವುದನ್ನು ಸಭೆಯು ತೀವ್ರವಾಗಿ ಪರಿಗಣಿಸಿತು. ಶ್ರೀ. ಪ್ರಸನ್ನ ಕುಮಾರ್ ರೈ ಇವರ ನೇತೃತ್ವದಲ್ಲಿ ಸಮಿತಿಯು ಕಾಲೇಜಿಗೆ ಭೇಟಿ ನೀಡಿ ಕಾಲೇಜಿನ ಪರಿಸ್ಥಿತಿಯ ಕುರಿತು ನೀಡಿದ ವರದಿಯ ಬಗ್ಗೆ ತೆಗೆದುಕೊಂಡ ಕ್ರಮಗಳನ್ನು ಚರ್ಚಿಸಿತು. ಅಲ್ಲದೆ ಉಪನ್ಯಾಸಕರು ಹಲವು ದೂರುಗಳನ್ನು ವಿಶ್ವವಿದ್ಯಾನಿಲಯಕ್ಕೆ ನೀಡಿರುವುದನ್ನು ಗಮನಿಸಿತು. ಡಾ. ಪಾರ್ವತಿ ಅಪ್ಪಯ್ಯನವರು ಸತ್ಯಶೋಧನಾ ಸಮಿತಿಯಲ್ಲಿ ಭಾಗವಹಿಸಿದ ಸಿಂಡಿಕೇಟ್ ಸದಸ್ಯರ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡಿರುವುದು, ಹಾಗೂ ಡಾ. ಪುಷ್ಪಾ ಕುಟ್ಟಣ್ಣ ಇವರ ವಿರುದ್ಧ ಪತ್ರಿಕೆಯಲ್ಲಿ ಹೇಳಿಕೆ ನೀಡಿರುವುದನ್ನು ಕೂಡ ಗಂಭೀರವಾಗಿ ಪರಿಗಣಿಸಿ ಕಾರಣ ಕೇಳಿ ನೋಟೀಸ್‌ನ್ನು ನೀಡಲು ಕುಲಸಚಿವರಿಗೆ ತಿಳಿಸಿತು. ವಿಶ್ವವಿದ್ಯಾನಿಲಯದಿ0ದ ಅನುಮತಿ ಇಲ್ಲದೆ ಡಾ.ಪಾರ್ವತಿ ಅಪ್ಪಯ್ಯರವರು ಪತ್ರಿಕಾಗೋಷ್ಠಿಯನ್ನು ಕರೆದು ಹೇಳಿಕೆ ನೀಡುತ್ತಿರುವುದರ ಬಗ್ಗೆ KCSR ನಿಯಮಾನುಸಾರ ಕ್ರಮಜರುಗಿಸಬೇಕೆ0ದು ಸಭೆಯಲ್ಲಿ ಸದಸ್ಯರು ಕುಲಸಚಿವರಿಗೆ ತಿಳಿಸಿದರು.

CPE ಯೋಜನೆಯಲ್ಲಿ ದೊರೆತ ಅನುದಾನವನ್ನು ಕೂಡ ಇದುವರೆಗೆ ಬಳಸದೆ ಇರುವುದನ್ನು ಸಭೆಯು ಗಂಭೀರವಾಗಿ ಪರಿಗಣಿಸಿತು. ವಿಶ್ವವಿದ್ಯಾನಿಲಯವು ಪರೀಕ್ಷೆಗಳನ್ನು ನಡೆಸುವ ಸಂದರ್ಭದಲ್ಲಿ ಅವರು ಎಸಗಿದ ಪ್ರಮಾದಗಳನ್ನು, ಆ ಕುರಿತು ಬಂದ ವಿಚಾರಣಾ ವರದಿಗಳನ್ನು ಸಭೆಯು ಪರಿಶೀಲಿಸಿತು. ಕಾಲೇಜಿನ ಶಿಕ್ಷಕ–ಪೋಷಕ ಸಂಘದ ಹಣವನ್ನು ಅಧಿಕಾರವಿಲ್ಲದೆ ಬಳಸಿದ ಬಗ್ಗೆ ಹಾಗೂ ಕಾಲೇಜಿಗೆ ತತ್‌ಕ್ಷಣದ, ತುರ್ತಾದ ರಿಪೇರಿ ಕಾರ್ಯ ಹಾಗೂ ವೆಚ್ಚಗಳಿಗೆ ನೀಡಿದ ಮುಂಗಡವನ್ನು ದುರ್ಬಳಕೆ ಮಾಡಿಕೊಂಡ ದೂರುಗಳನ್ನು ಪ್ರಸ್ತಾಪಿಸಿದ ಸದಸ್ಯರು ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಕಲೆಹಾಕಲು ಕುಲಸಚಿವರಿಗೆ ಸೂಚಿಸಿತು. ವಿಶ್ವವಿದ್ಯಾನಿಲಯವು ಕಡ್ಡಾಯ ರಜೆಯಲ್ಲಿ ಡಾ.ಪಾರ್ವತಿ ಅಪ್ಪಯ್ಯನವರನ್ನು ಕಳುಹಿಸಿದರ ವಿರುದ್ಧ ತಡೆಯಾಜ್ಞೆ ತಂದ ಸಂದರ್ಭದಲ್ಲಿ ಅವರು ಪ್ರಭಾರ ಪ್ರಾಂಶುಪಾಲರಾದ ಡಾ.ಟಿ.ಡಿ.ತಿಮ್ಮಯ್ಯ ಇವರೊಂದಿಗೆ ಅಧಿಕಾರ ಪುನರ್ ಹಸ್ತಾಂತರದ ಕುರಿತು ಪ್ರಾಂಶುಪಾಲರಿಗೆ ತಕ್ಕುದಲ್ಲದ ರೀತಿಯಲ್ಲಿ ಅನುಚಿತವಾಗಿ ವರ್ತಿಸಿದ ಕುರಿತು ದೂರುಗಳು ಬಂದ ಕುರಿತು ಕಾರಣ ಕೇಳುವಂತೆ ಕೂಡ ಕುಲಸಚಿವರಿಗೆ ತಿಳಿಸಲಾಯಿತು. ಅಲ್ಲದೆ ಅವರ ಕುರಿತು ಇರುವ ಇನ್ನಿತರ ದೂರುಗಳನ್ನು ಸಮಗ್ರವಾಗಿ ಚರ್ಚಿಸಿತು. ಡಾ. ಕುಮಾರಸ್ವಾಮಿ ವಿರುದ್ಧ ನಡೆಯುತ್ತಿರುವ ಪೋಲೀಸ್ ಇಲಾಖಾ ವಿಚಾರಣೆಗಳನ್ನು ಕೂಡ ಗಮನಕ್ಕೆ ತೆಗೆದುಕೊಂಡಿತು. ನಂತರ ಡಾ.ಪಾರ್ವತಿ ಅಪ್ಪಯ್ಯ, ಪ್ರಾಂಶುಪಾಲರು, ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ ಇವರನ್ನು ವಿಶ್ವವಿದ್ಯಾನಿಲಯದ ಆಡಳಿತದ ಹಿತದೃಷ್ಟಿಯಿಂದ ವಿಶ್ವವಿದ್ಯಾನಿಲಯ ಪ್ರಥಮ ದರ್ಜೆ ಕಾಲೇಜು, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಇಲ್ಲಿಗೆ ಪ್ರಾಂಶುಪಾಲರಾಗಿ ತತ್‌ಕ್ಷಣದಿಂದ ಜಾರಿಗೆ ಬರುವಂತೆ ವರ್ಗಾಯಿಸಲು ಸಭೆಯು ನಿರ್ಧರಿಸಿತು. ಡಾ. ಟಿ.ಡಿ. ತಿಮ್ಮಯ್ಯ, ಸಹ ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜು, ಇವರನ್ನು ಪ್ರಭಾರ ಪ್ರಾಂಶುಪಾಲರಾಗಿ ನೇಮಿಸಲು ನಿರ್ಧರಿಸಲಾಯಿತು.

ಸಭೆಯು ಮುಂದುವರಿದು ಡಾ.ಕುಮಾರಸ್ವಾಮಿ.ಎಂ., ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ ಇವರನ್ನು ಇತಿಹಾಸ ವಿಭಾಗ, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿಗೆ ವರ್ಗಾಯಿಸಲು ನಿರ್ಧರಿಸಲಾಯಿತು. ಅಲ್ಲದೆ ಮುಂದಿನ ವಿಶೇಷ ಸಿಂಡಿಕೇಟ್‌ಗೆ ತೆಗೆದುಕೊಂಡ ಕ್ರಮಗಳ ಕುರಿತು ವರದಿಯನ್ನು ನೀಡುವಂತೆ ಕುಲಸಚಿವರಿಗೆ ಸೂಚಿಸಿತು.

9. ಡಾ.ಪುಷ್ಪ ಕುಟ್ಟಣ್ಣ, ಸಿಂಡಿಕೇಟು ಸದಸ್ಯರು ಸಭೆಯಲ್ಲಿ ಮಾತನಾಡುತ್ತಾ, ಡಾ. ಪಾರ್ವತಿ ಅಪ್ಪಯ್ಯ, ಪ್ರಾಂಶುಪಾಲರು ಇವರು ದಿನಾಂಕ 23.08.2017ರ ವಿಜಯವಾಣಿ ದಿನಪತ್ರಿಕೆಯಲ್ಲಿ 'ಡಾ. ಪುಷ್ಪ ಕುಟ್ಟಣ್ಣ ನೀಡಿರುವ ವ್ಯತಿರಿಕ್ತ ವರದಿಯಿಂದ ತನ್ನನ್ನು ತಕ್ಷಣವೇ ಕಡ್ಡಾಯ ರಜೆಯ ಮೇಲೆ ತೆರಳಲು ಸೂಚನೆ ನೀಡಲಾಗಿದೆ'ಎಂಬ ಹೇಳಿಕೆಯನ್ನು ನೀಡಿದುದರ ಬಗ್ಗೆ ಪ್ರಸ್ತಾಪಿಸಿದ್ದು, ಸಿಂಡಿಕೇಟು ಸಭೆಯು ಈ ಬಗ್ಗೆ ಚರ್ಚಿಸಿ, ಪ್ರಾಂಶುಪಾಲರಿಂದ ವಿವರಣೆಯನ್ನು ಪಡೆಯಲು ಕುಲಸಚಿವರಿಗೆ ಸೂಚಿಸಿತು.

10. ಸಭೆಯು, ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಭೋಧಕೇತರ ಸಿಬ್ಬಂದಿಗಳು ವೃತ್ತಿ ಭಢ್ತಿ ಹಾಗೂ ಪದೋನ್ನತಿಯನ್ನು ಬಯಸಿ ಮಾಡುತ್ತಿರುವ ಮನವಿಗಳನ್ನು ಚರ್ಚಿಸಿತು. ಶ್ರೀಮತಿ ಬಿ.ಕೆ. ಪವಿತ್ರ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಲಯವು ದಿನಾಂಕ 09.02.2017ರಂದು ನೀಡಿರುವ ತೀರ್ಪಿನ ಹಿನ್ನಲೆಯಲ್ಲಿ ಕರ್ನಾಟಕ ಸರ್ಕಾರವು ಭಢ್ತಿ ನೀಡುವುದನ್ನು ತಾತ್ಕಲಿಕವಾಗಿ ಸ್ಥಗಿತಗೊಳಿಸಿ ನೀಡಿದ ಅದೇಶವನ್ನು ಗಮನಿಸಿತು. ಕರ್ನಾಟಕ ಸರ್ಕಾರವು ದಿನಾಂಕ 22.05.2017ರಂದು KCSR 1958ರ ನಿಯಮ 32ರ ಅಡಿ ಷರತ್ತುಗಳಿಗೆ ಒಳಪಟ್ಟು ಕೆಲವು ಉದ್ಯೋಗಿಗಳಿಗೆ ಸ್ವತಂತ್ರ ಪ್ರಭಾರವನ್ನು ನೀಡಿರುವುದನ್ನು ಗಮನದಲ್ಲಿರಿಸಿಕೊಂಡು ಅದರ ಮಾದರಿಯಲ್ಲಿಯೇ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಅರ್ಹ ಹಾಗೂ ಜೇಷ್ಠತೆಯನ್ನು ಹೊಂದಿದ ಉದ್ಯೋಗಿಗಳಿಗೆ ಸ್ವತಂತ್ರ ಪ್ರಭಾರವನ್ನು ನೀಡಲು ನಿರ್ಣಯಿಸಿತು.

11. ಸಭೆಯು, ದಿನಾಂಕ 12.10.2017ರಂದು ವಿಶ್ವವಿದ್ಯಾನಿಲಯದ ಉದ್ಯೋಗಿಯಾಗಿದ್ದ ಶ್ರೀ. ಭೀಮ (ಮೈಕ್ರೋಟ್ರಾನ್ ವಿಭಾಗ) ಇವರು ತೀರಿಕೊಂಡಾಗ ಅವರ ಶವವನ್ನು ಮಂಗಳೂರು ವಿಶ್ವವಿದ್ಯಾನಿಲಯದ ವಸತಿ ನಿಲಯದ ಪ್ರದೇಶಕ್ಕೆ ರಾತ್ರಿ 09.30ರ ವೇಳೆಗೆ ಸಾರ್ವಜನಿಕ ದರ್ಶನಕ್ಕಾಗಿ ತಂದಾಗ ಅಲ್ಲಿ ಪ್ರೊ. ವಿಶ್ವನಾಥ್ (ಅರ್ಥಶಾಸ್ತ್ರ ವಿಭಾಗ), ಪ್ರೊ. ಶಿವಣ್ಣ (ಸಾಗರ ವಿಜ್ಞಾನ ವಿಭಾಗ) ಮುಂತಾದವರು ಕುಲಸಚಿವರು ಹಾಗೂ ಕುಲಪತಿಗಳೊಂದಿಗೆ ಪರಿಸ್ಥಿತಿಯ ಗಂಭೀರತೆಯನ್ನು ಅರಿತುಕೊಳ್ಳದೆ ಉದ್ದಟತನ ಹಾಗೂ ಅಗೌರವ ಪೂರಕವಾಗಿ ನಡೆದುಕೊಂಡ ಘಟನೆಯನ್ನು ಚರ್ಚಿಸಿ ಇದೊಂದು ಗಂಭೀರವಾದ ಅಶಿಸ್ತಿನ ವರ್ತನೆ ಎಂದು ಪರಿಗಣಿಸಿ ಇಂತಹ ಅಶಿಸ್ತಿನ ಘಟನೆಗಳು ಮುಂದೆ ನಡೆಯದಂತೆ ವಿಶ್ವವಿದ್ಯಾನಿಲಯ ಕ್ರಮಕೊಳ್ಳಬೇಕೆಂದು ಅಗ್ರಹಿಸಿತಲ್ಲದೆ ಇದಕ್ಕೆ ಕಾರಣರಾದವರ ವಿರುದ್ದ ಕ್ರಮಕೈಗೊಳ್ಳಲು ಅಡಳಿತಕ್ಕೆ ಸೂಚನೆಯನ್ನು ನೀಡಿತು. ಅಲ್ಲದೆ ಸಭೆಯು ವಿಶ್ವವಿದ್ಯಾನಿಲಯದ ಉದ್ಯೋಗಿಯು ಅಕಾಲ ನಿಧನಹೊಂದಿದ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯದ ಅಡಳಿತವು ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು

ಮಾರ್ಗದರ್ಶಕ ಸೂತ್ರಗಳನ್ನು ರಚಿಸಲು ಸಮಿತಿಯೊಂದನ್ನು ನೇಮಿಸಲು ಕುಲಪತಿಗಳಿಗೆ ಅಧಿಕಾರ ನೀಡಿತು.

## ಪ್ರಸ್ತಾವಿಕ

### I ನಡಾವಳಿಗಳ ದೃಢೀಕರಣ

ದಿನಾಂಕ 18.08.2017ರಂದು ನಡೆದ 2017ನೇ ಸಾಲಿನ ಐದನೆಯ ಸಾಮಾನ್ಯ ನಡಾವಳಿಗಳನ್ನು ಈ ಕೆಳಗಿನ ತಿದ್ದುಪಡಿಗಳೊಂದಿಗೆ ದೃಢೀಕರಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ.5:5(2017)

**ವಿಷಯ:** ಚಿಕ್ಕ ಅಳುವಾರದಲ್ಲಿರುವ ಮಂಗಳೂರು ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕೇಂದ್ರಕ್ಕೆ 'ಕಾವೇರಿ ಗಂಗೋತ್ರಿ' ಅಥವಾ ಬೇರೆ ಯಾವುದಾದರೂ ಹೆಸರು ನಾಮಕರಣ ಮಾಡುವ ಬಗ್ಗೆ.

**ನಿರ್ಣಯ:** ಸದರಿ ವಿಷಯದ ಬಗ್ಗೆ ಸಭೆಯು ಸುದೀರ್ಘವಾಗಿ ಚರ್ಚಿಸಿ ಸ್ನಾತಕೋತ್ತರ ಕೇಂದ್ರಕ್ಕೆ 'ಜ್ಞಾನ ಕಾವೇರಿ' ಎಂದು ನಾಮಕರಣ ಮಾಡುವುದಾಗಿ ನಿರ್ಣಯಿಸಲಾಯಿತು. ಅರ್ಥಪೂರ್ಣವಾದ ಹೆಸರನ್ನು ಸೂಚಿಸಿದ್ದಕ್ಕಾಗಿ ಮಾನ್ಯ ಸದಸ್ಯರಾದ ಡಾ. ಪುಷ್ಪಕುಟ್ಟಣ್ಣ ಇವರನ್ನು ಅಭಿನಂದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ ಸಾ.ಸ.5:7(2017)

**ವಿಷಯ:** ಎಪ್ರಿಲ್/ಮೇ 2017ರಲ್ಲಿ ಜರುಗಿದ ವಿಶ್ವವಿದ್ಯಾನಿಲಯದ ವಿವಿಧ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ನಡೆಸಿದ ಅವ್ಯವಹಾರಗಳು – ದಂಡನೆಯನ್ನು ದೃಢಪಡಿಸುವ ಬಗ್ಗೆ.

**ನಿರ್ಣಯ:** ಅಡಕದಲ್ಲಿರುವ ಕ್ರಮ ಸಂಖ್ಯೆ 15, 45 ಮತ್ತು 65ರ ಮೂರು ವಿದ್ಯಾರ್ಥಿಗಳ ದಂಡನೆಯನ್ನು ಪುನರ್ ಪರಿಶೀಲಿಸಲು ಅನುಮತಿ ಕೊಟ್ಟು ಉಳಿದ ವಿದ್ಯಾರ್ಥಿಗಳಿಗೆ ತನಿಖಾ ಸಮಿತಿಯ ಶಿಫಾರಸ್ಸಿನಂತೆ ಪ್ರಸ್ತಾಪಿಸಲಾದ ದಂಡನೆಯನ್ನು ಅನುಮೋದಿಸಲಾಯಿತು.

### II ಅನುಸರಣಾ ವರದಿಯ ಅನುಮೋದನೆ

ದಿನಾಂಕ 07.07.2017 ರಂದು ನಡೆದ 2017ನೇ ಸಾಲಿನ ನಾಲ್ಕನೆಯ ಸಾಮಾನ್ಯ ಸಭೆಯ ಅನುಸರಣಾ ವರದಿಯ ದೃಢೀಕರಣ.

### III ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು:

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ ಸಾ.ಸ.6:1(2017)

**ವಿಷಯ :** ವಿದೇಶಿ ಸಂಶೋಧನಾ ವಿದ್ಯಾರ್ಥಿಗಳಿಗೆ ಪಿಹೆಚ್.ಡಿ. ಮೌಖಿಕ ಪರೀಕ್ಷೆಯನ್ನು Skype ಮೂಲಕ ನಡೆಸಲು ಶುಲ್ಕ ನಿಗದಿಪಡಿಸುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಸಾ.ಸ.6:2(2017)

**ವಿಷಯ :** 'ಆದರ್ಶ ಕಾಲೇಜು, ಕಕ್ಕ ಪದವು, ಅಂಚೆ:ಉಳಿ, ಬಂಟ್ವಾಳ 574326 ದ.ಕ.,' ಎಂಬ ಕಾಲೇಜಿನ ಹೆಸರನ್ನು ಎಲ್.ಸಿ.ಆರ್. ಇಂಡಿಯನ್ ಪದವಿ ಕಾಲೇಜು, (LCR Indian Degree College), ಎಂಬುದಾಗಿ ಬದಲಾಯಿಸುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಸಾ.ಸ.6:3(2017)

**ವಿಷಯ :** ಸಂತ ಅಲೋಶಿಯಸ್ ಕಾಲೇಜು (ಸ್ವಾಯತ್ತ), ಮಂಗಳೂರು ಸಂಸ್ಥೆಯ ಆಂಗ್ಲ ಮತ್ತು ರಸಾಯನಶಾಸ್ತ್ರ ವಿಭಾಗಗಳನ್ನು ಮಂಗಳೂರು ವಿಶ್ವವಿದ್ಯಾನಿಲಯದ ಪಿಎಚ್.ಡಿ ವ್ಯಾಸಂಗಕ್ಕೆ ಸಂಶೋಧನಾ ಕೇಂದ್ರವನ್ನಾಗಿ ಮಾನ್ಯತೆ ಮಾಡುವ ಬಗ್ಗೆ.

**ನಿರ್ಣಯ:** ಪಿಎಚ್.ಡಿ ವ್ಯಾಸಂಗಕ್ಕಾಗಿ ಸಂಶೋಧನಾ ಕೇಂದ್ರವನ್ನಾಗಿ ಮಾನ್ಯತೆ ಮಾಡುವ ಬಗ್ಗೆ ಸಮಿತಿಯ ಶಿಫಾರಸ್ಸಿನ ಮೇರೆಗೆ ಸಂತ ಅಲೋಶಿಯಸ್ ಕಾಲೇಜು (ಸ್ವಾಯತ್ತತೆ), ಮಂಗಳೂರು ಸಂಸ್ಥೆಯ ಆಂಗ್ಲ ಮತ್ತು ರಸಾಯನಶಾಸ್ತ್ರ ವಿಭಾಗಗಳನ್ನು ಸಂಶೋಧನಾ ಕೇಂದ್ರವನ್ನಾಗಿ ಮಾನ್ಯತೆ ಮಾಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಸಾ.ಸ.6:4(2017)

**ವಿಷಯ :** ಶೈಕ್ಷಣಿಕ ವರ್ಷ 2017–18ನೇ ಸಾಲಿನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗಗಳಲ್ಲಿ, ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಲ್ಲಿ ಮತ್ತು ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ, ಕುಶಾಲನಗರ ಇಲ್ಲಿ ನಡೆಸಲ್ಪಡುವ ಕೋರ್ಸುಗಳಿಗೆ ವಿದ್ಯಾರ್ಥಿ ಪರಿಮಿತಿ ನಿಗದಿಪಡಿಸಿರುವ ಬಗ್ಗೆ.

**ನಿರ್ಣಯ:** ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ ಸಾ.ಸ.6:5(2017)

**ವಿಷಯ :** ವಿಶ್ವವಿದ್ಯಾನಿಲಯ ಪರೀಕ್ಷಾ ಅವ್ಯವಹಾರ ತನಿಖಾ ಸಮಿತಿಯನ್ನು ಪುನರ್ರಚಿಸುವ ಬಗ್ಗೆ.

**ನಿರ್ಣಯ:** ತನಿಖಾ ಸಮಿತಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಕಾನೂನು ಘಟಕ ಸಾ.ಸ.6:6(2017)

**ವಿಷಯ :** ಶ್ರೀ ಕೆ. ಕರುಣಾಕರ, ನ್ಯಾಯವಾದಿ, ಬೆಂಗಳೂರು ಇವರನ್ನು ಮಂಗಳೂರು ವಿಶ್ವವಿದ್ಯಾನಿಲಯದ ನ್ಯಾಯವಾದಿಗಳ ಯಾದಿಗೆ ಸೇರಿಸುವ ಬಗ್ಗೆ.

**ನಿರ್ಣಯ:** ಸದರಿಯವರನ್ನು ವಿಶ್ವವಿದ್ಯಾನಿಲಯದ ಯಾದಿಯಲ್ಲಿರುವ ಹಾಲಿ ವಕೀಲರಿಗೆ ನಿಗದಿಪಡಿಸಿರುವ ಕಾಲಮಿತಿ ಹಾಗೂ ಇತರ ಷರತ್ತಿಗೊಳಪಟ್ಟು (ಅಂದರೆ ದಿ.13.01.2018ರ ವರೆಗೆ) ಮಂಗಳೂರು ವಿಶ್ವವಿದ್ಯಾನಿಲಯದ ನ್ಯಾಯವಾದಿಗಳ ಯಾದಿಗೆ ಸೇರಿಸುವುದನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ.6:7(2017)

**ವಿಷಯ :** ಡಾ. ಕಿಶೋರಿ ನಾಯಕ್, ಪ್ರಾಧ್ಯಾಪಕರು, ಇಂಗ್ಲೀಷ್ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರ ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸಿದ ಅವಧಿಯನ್ನು ಪಿಂಚಣಿ ಸೌಲಭ್ಯಗಳಿಗೆ ಪರಿಗಣಿಸುವ ಬಗ್ಗೆ.

**ನಿರ್ಣಯ:** ಸದರಿಯವರು ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ದಿನಾಂಕ 01.02.1990 ರಿಂದ 03.04.1995ರ ವರೆಗೆ ಸೇವೆ ಸಲ್ಲಿಸಿದ ಅವಧಿಯನ್ನು ಪಿಂಚಣಿ ಸೌಲಭ್ಯಗಳಿಗೆ ಪರಿಗಣಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ.6:8(2017)

**ವಿಷಯ :** ಡಾ. ಸಿ. ಕೃಷ್ಣಯ್ಯ, ಪ್ರಾಧ್ಯಾಪಕರು, ಸಾಗರ ಭೂ ವಿಜ್ಞಾನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರ ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸಿದ ಅವಧಿಯನ್ನು ಪಿಂಚಣಿ ಸೌಲಭ್ಯಗಳಿಗೆ ಪರಿಗಣಿಸುವ ಬಗ್ಗೆ.

**ನಿರ್ಣಯ:** ಸದರಿಯವರು ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ದಿನಾಂಕ 03.08.1996 ರಿಂದ 31.01.2003ರ ವರೆಗೆ ಸೇವೆ ಸಲ್ಲಿಸಿದ ಅವಧಿಯನ್ನು ಪಿಂಚಣಿ ಸೌಲಭ್ಯಗಳಿಗೆ ಪರಿಗಣಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ.6:9(2017)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯ ಆವರಣ, ಅಧೀನ ಕಾಲೇಜುಗಳು, ಸ್ನಾತಕೋತ್ತರ ಕೇಂದ್ರಗಳಿಗೆ ಸಂಬಂಧಿಸಿ ಕಾಮಗಾರಿಗಳ ನಿರ್ವಹಣೆ ಕುರಿತು ರೂ. 10.00 ಲಕ್ಷದ

ಒಳಗಿನ ಕಾಮಗಾರಿಗಳ ಉಸ್ತುವಾರಿಯನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಓರ್ವ ಸಹಾಯಕ ಅಭಿಯಂತರರಿಗೆ ವಹಿಸುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ.6:10(2017)

**ವಿಷಯ :** ಸರಕಾರಿ ಪ್ರಥಮ ದರ್ಜೆ ಕಾಲೇಜು, ಬೆಳ್ತಂಗಡಿಯನ್ನು ವಿಶ್ವವಿದ್ಯಾನಿಲಯ ಘಟಕ ಕಾಲೇಜಾಗಿ ಪರಿವರ್ತಿಸುವ ಬಗ್ಗೆ.

**ನಿರ್ಣಯ:** ಸದರಿ ಕಾಲೇಜಿಗೆ ಭೇಟಿ ನೀಡಿ ಅಲ್ಲಿನ ಮೂಲಭೂತ ಸ್ಥಿತಿಗತಿಗಳ ಬಗ್ಗೆ ಅಧ್ಯಯನ ಮಾಡಿ ಸೂಕ್ತ ಶಿಫಾರಸ್ಸುಗಳೊಂದಿಗೆ ವರದಿಯನ್ನು ನೀಡಲು ಸಮಿತಿಯೊಂದನ್ನು ರಚಿಸಲು ನಿರ್ಧರಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ.6:11(2017)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ Centre for Aplplication of Radioisotopes & Radiation Technology (CARRT) ಸ್ಥಾಪನೆಗೆ ಸಂಬಂಧಿಸಿದ ಕರಡು ಅನುಶಾಸನವನ್ನು ಸರಕಾರಕ್ಕೆ ಮರು ಸಲ್ಲಿಸುವ ಬಗ್ಗೆ.

**ನಿರ್ಣಯ:** ದಿನಾಂಕ 16.09.2017ರಂದು ನಡೆದ ಶೈಕ್ಷಣಿಕ ಮಂಡಳಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ ಸಾ.ಸ.6:12 (2017)

**ವಿಷಯ :** ಎಪ್ರಿಲ್/ಮೇ 2017ರಲ್ಲಿ ಜರುಗಿದ ವಿಶ್ವವಿದ್ಯಾನಿಲಯದ ವಿವಿಧ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ನಡೆಸಿದ ಅವ್ಯವಹಾರಗಳು – ದಂಡನೆಯನ್ನು ದೃಢಪಡಿಸುವ ಬಗ್ಗೆ.

**ನಿರ್ಣಯ:** ತನಿಖಾ ಸಮಿತಿಯ ಶಿಫಾರಸ್ಸಿನಂತೆ ಪ್ರಸ್ತಾಪಿಸಲಾದ ದಂಡನೆಯನ್ನು ದೃಢೀಕರಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಸಾ.ಸ.6:13(2017)

**ವಿಷಯ :** ಇಸಿಆರ್ ಇನ್‌ಸ್ಟಿಟ್ಯೂಟ್ ಆಫ್ ಮೇನೇಜ್‌ಮೆಂಟ್ ಸ್ಟಡೀಸ್, ಕೋಟೇಶ್ವರ ಎಂಬ ವಿದ್ಯಾ ಸಂಸ್ಥೆಯಲ್ಲಿ 'ಏವಿಯೇಶನ್ ಆ್ಯಂಡ್ ಹಾಸ್ಪಿಟಾಲಿಟಿ ಮೇನೇಜ್‌ಮೆಂಟ್ ಕೋರ್ಸ್‌ಗೆ ಮಾಡಿರುವ ಪ್ರವೇಶಾತಿ ಅನುಮೋದನೆ ಬಗ್ಗೆ.

**ನಿರ್ಣಯ:** ಸದರಿ ಕೋರ್ಸಿಗೆ ಈಗಾಗಲೇ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ಭವಿಷ್ಯದ ಹಿತದೃಷ್ಟಿಯಿಂದ ಪ್ರವೇಶಾತಿಯನ್ನು ಅನುಮೋದಿಸಬಹುದು ಹಾಗೂ ನಿಯಮಬಾಹಿರವಾಗಿ 119 ವಿದ್ಯಾರ್ಥಿಗಳ ಪ್ರವೇಶಾತಿ ಮಾಡಿರುವುದಕ್ಕೆ ಸಂಸ್ಥೆಗೆ ರೂ.25 ಲಕ್ಷ ದಂಡ ಶುಲ್ಕ ವಿಧಿಸುವುದು ಎಂದು ನಿರ್ಣಯಿಸಲಾಯಿತು. ಅಲ್ಲದೆ ಮುಂದಿನ ಶೈಕ್ಷಣಿಕ ವರ್ಷ 2018–19 ನೇ ಸಾಲಿನಿಂದ ಸದರಿ ಕೋರ್ಸಿಗೆ ಪ್ರವೇಶಾತಿ ಮಾಡಲು ಅನುಮತಿ ನೀಡಬಾರದೆಂದು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು ಸಾ.ಸ.6:14(2017)

**ವಿಷಯ :** ಪದವಿ ಮಟ್ಟದ ಸಮಾಜಕಾರ್ಯ ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಬಗ್ಗೆ.

**ನಿರ್ಣಯ:** ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ.6:15(2017)

**ವಿಷಯ :** ವ್ಯವಹಾರ ಆಡಳಿತ ವಿಭಾಗ – ಗಣಕಯಂತ್ರ ಪ್ರಯೋಗಾಲಯದ 'PROWESS' Database ವಾರ್ಷಿಕ ಚಂದಾ ನವೀಕರಣ ಶುಲ್ಕ ಪಾವತಿಗೆ ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** M/s. Centre for Monitoring Indian Economy Pvt. Ltd., Mumbai ಇವರಿಂದ ಡಿಸೆಂಬರ್ 2017 ರಿಂದ ನವೆಂಬರ್ 2018ರ ವರೆಗೆ ನವೀಕರಿಸುವ ಶುಲ್ಕ ರೂ.2,12,400/– (ತೆರಿಗೆ ಸೇರಿ) ಮಂಜೂರಾತಿ ನೀಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ.6:16(2017)

**ವಿಷಯ :** BRNS CRP – CARER ಪ್ರಯೋಗಾಲಯದಲ್ಲಿ Computational Fluid Dynamics Software ಅಳವಡಿಕೆ ಸಂಬಂಧಿಸಿದ ಪ್ರಸ್ತಾವನೆ ಮಂಜೂರಾತಿ ಬಗ್ಗೆ.

**ನಿರ್ಣಯ:** ದಿನಾಂಕ 11.10.2017ರ ಖರೀದಿ ಸಮಿತಿ ಸಭೆಯ ಶಿಫಾರಸ್ಸಿನಂತೆ CFD Modeling Software-Venticlim CFD & Pania CFD ಅನ್ನು ತಲಾ ರೂ.2,00,000+ ಉಋಖಿ ವೆಚ್ಚದಲ್ಲಿ ಖರೀದಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ.6:17(2017)

**ವಿಷಯ :** SERB-DST ಪ್ರಾಜೆಕ್ಟ್, ಭೌತಶಾಸ್ತ್ರ ವಿಭಾಗ – Fluorescence

Spectrophotometer ಉಪಕರಣ ಖರೀದಿ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ದಿನಾಂಕ 11.10.2017ರ ಖರೀದಿ ಸಮಿತಿ ಸಭೆಯ ಶಿಫಾರಸ್ಸಿನಂತೆ Fluorescence Spectrophotometer ಉಪಕರಣವನ್ನು ರೂ.2,700,000 ವೆಚ್ಚದಲ್ಲಿ ಖರೀದಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ.6:18(2017)

**ವಿಷಯ :** BRNS CRP – CARER ಕೇಂದ್ರದ ಪ್ರಯೋಗಾಲಯದಲ್ಲಿ Scientific Audio Visual Documentary ಸೌಲಭ್ಯ ಅಳವಡಿಕೆ ಸಂಬಂಧಿಸಿದ ಪ್ರಸ್ತಾವನೆ ಮಂಜೂರಾತಿ ಬಗ್ಗೆ.

**ನಿರ್ಣಯ:** ದಿನಾಂಕ 11.10.2017ರ ಖರೀದಿ ಸಮಿತಿ ಸಭೆಯ ಶಿಫಾರಸ್ಸಿನಂತೆ Scientific Audio Visual Documentary ಉಪಕರಣವನ್ನು ರೂ.4,19,750.00 + ತೆರಿಗೆ ಪ್ರತ್ಯೇಕ ವೆಚ್ಚದಲ್ಲಿ ಖರೀದಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ.6:19(2017)

**ವಿಷಯ :** ಪ್ರಸಾರಾಂಗ – **"ಕೊಡಗಿನ ಕೆಂಬಟ್ಟಿ ಸಂಸ್ಕೃತಿ"** ಎಂಬ ಕೃತಿಯನ್ನು ಮುದ್ರಿಸಲು ಅನುಮತಿ ನೀಡುವ ಬಗ್ಗೆ.

**ನಿರ್ಣಯ:** ದಿನಾಂಕ 11.10.2017ರ ಖರೀದಿ ಸಮಿತಿ ಸಭೆಯ ಶಿಫಾರಸ್ಸಿನಂತೆ ರೂ.1,23,500/– ವೆಚ್ಚದಲ್ಲಿ ಮುದ್ರಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ.6:20(2017)

**ವಿಷಯ :** Gauhati ವಿಶ್ವವಿದ್ಯಾನಿಲಯದೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲು ತಾತ್ವಿಕ ಅನುಮೋದನೆ ನೀಡುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ.6:21(2017)

**ವಿಷಯ :** National Education Foundation (NEF), State University of New York, Washington DC ಇವರು ಮಂಗಳೂರು ವಿಶ್ವವಿದ್ಯಾನಿಲಯದ ಜೊತೆ ಮಾಡಿಕೊಳ್ಳ ಬಯಸಿದ ಒಡಂಬಡಿಕೆ ಪತ್ರದ ಅನುಮೋದನೆ ಕುರಿತು.

**ನಿರ್ಣಯ:** ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ ಸಾ.ಸ.6:22(2017)

**ವಿಷಯ :** ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿಗೆ ಜೆರಾಕ್ಸ್ ಯಂತ್ರ ಖರೀದಿಸುವ ಕುರಿತು.

**ನಿರ್ಣಯ:** ದಿನಾಂಕ 11.10.2017ರ ಖರೀದಿ ಸಮಿತಿ ಸಭೆಯ ಶಿಫಾರಸ್ಸಿನಂತೆ ರೂ.1,23,000/–+ ಉಖಿ ವೆಚ್ಚದಲ್ಲಿ ಖರೀದಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ ಸಾ.ಸ.6:23(2017)

**ವಿಷಯ :** ಭೂಗೋಳಶಾಸ್ತ್ರ ವಿಭಾಗಕ್ಕೆ ವಿದ್ಯಾರ್ಥಿ ಮೇಜು ಮತ್ತು ಕುರ್ಚಿ ಖರೀದಿಸುವ ಕುರಿತು.

**ನಿರ್ಣಯ:** ದಿನಾಂಕ 11.10.2017ರ ಖರೀದಿ ಸಮಿತಿ ಸಭೆಯ ಶಿಫಾರಸ್ಸಿನಂತೆ ರೂ.1,59,996/– ವೆಚ್ಚದಲ್ಲಿ ಪೀಠೋಪಕರಣಗಳನ್ನು ಖರೀದಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಾರ್ವತ್ರಿಕ ಸಾ.ಸ.6:24(2017)

**ವಿಷಯ :** ದೈಹಿಕ ಶಿಕ್ಷಣ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರಿಗೆ ಅಂತರ್ ವಿಶ್ವವಿದ್ಯಾನಿಲಯ ಕ್ರೀಡಾ ಚಟುವಟಿಕೆಗಳಿಗೆ ಟ್ರ್ಯಾಕ್ ಸೂಟ್ ಖರೀದಿಸುವ ಬಗ್ಗೆ.

**ನಿರ್ಣಯ:** ದಿನಾಂಕ 11.10.2017ರ ಖರೀದಿ ಸಮಿತಿ ಸಭೆಯ ಶಿಫಾರಸ್ಸಿನಂತೆ ರೂ.4,34,000/– ವೆಚ್ಚದಲ್ಲಿ ಖರೀದಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ.6:25(2017)

**ವಿಷಯ :** ಡಾ. ಎಂ. ಜಯಶಂಕರ್, ಪ್ರಾಧ್ಯಾಪಕರು, ಸೂಕ್ಷ್ಮಾಣು ಜೀವವಿಜ್ಞಾನ ವಿಭಾಗ, ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ ಇವರ ಮೇಲಿನ ದೂರುಗಳ ಬಗ್ಗೆ ನಡೆಸಿದ ಇಲಾಖಾ ವಿಚಾರಣೆಯ ವರದಿಯ ಮೇಲೆ ಮುಂದಿನ ಕ್ರಮ ಕೈಗೊಳ್ಳುವ ಬಗ್ಗೆ.

**ನಿರ್ಣಯ:** ಸಭೆಯು ಡಾ. ಎಂ.ಜಯಶಂಕರ್ ಇವರು, ಅವರ ಮೇಲಿನ ದೂರುಗಳಿಗೆ ಸಂಬಂಧಿಸಿದಂತೆ ನಡೆಸಲಾದ ವಿಚಾರಣೆಯ ವರದಿಯ ಆಧಾರದಲ್ಲಿ ವಿಶ್ವವಿದ್ಯಾನಿಲಯವು ನೀಡಿದ ಕಾರಣ ಕೇಳಿ ನೋಟೀಸಿಗೆ ಸದರಿ ಸಿಬ್ಬಂದಿಯು ನೀಡಿದ ವಿವರಣೆಯನ್ನು ಪರಿಶೀಲಿಸಿತು ಮತ್ತು ಸಿಬ್ಬಂದಿಯು ನೀಡಿದ ವಿವರಣೆಯು ಅಸಮರ್ಪಕವಾಗಿದೆ ಎಂದು ಅಭಿಪ್ರಾಯಪಟ್ಟಿತು. ಅಲ್ಲದೆ ಜಯಶಂಕರ್ ಮೇಲೆ ಇದುವರೆಗೆ ನಡೆದ ವಿಚಾರಣೆಗಳ ವರದಿಗಳು ಹಾಗೂ ಅವರ ವಿರುದ್ಧ ಕೈಗೊಂಡ ಶಿಸ್ತುಕ್ರಮಗಳಿಗೆ ಸಂಬಂಧಿಸಿದ ದಾಖಲೆಗಳು ಹಾಗೂ ಪ್ರಸ್ತುತ ವರದಿಗಳ ಕುರಿತು ಹಿರಿಯ ವಕೀಲರಿಂದ ಅಭಿಪ್ರಾಯವನ್ನು ಪಡೆದು ಮುಂದೆ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು

ಚರ್ಚಿಸಲು ಅದನ್ನು ವಿಶೇಷ ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಲು ಕುಲಸಚಿವರಿಗೆ ಸೂಚಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ.6:26(2017)

**ವಿಷಯ :** ಶ್ರೀ ವಿಜಯರಾಜ್ ಹೆಚ್., ಪ್ರಥಮ ದರ್ಜೆ ಸಹಾಯಕರು ಇವರ ಅಶಿಸ್ತಿನ ವರ್ತನೆಯ ಬಗ್ಗೆ.

**ನಿರ್ಣಯ:** ವಿಜಯರಾಜ್ .ಹೆಚ್ ಇವರು ವಿಶ್ವವಿದ್ಯಾನಿಲಯ ನೀಡಿದ ಕಾರಣ ಕೇಳಿ ಎರಡು ಬಾರಿ ನೋಟಿಸ್ ನೀಡಿದಾಗಲೂ ವಿವರಣೆ ಕೊಡಲು ನಿರಾಕರಿಸಿರುವುದಲ್ಲದೆ ಇದೂವರೆಗೆ ಪ್ರತಿಕ್ರಿಯೆ ನೀಡದೆ ಇರುವುದನ್ನು ಸಭೆಯು ಗಂಭೀರವಾಗಿ ಪರಿಗಣಿಸಿತು. ಅಲ್ಲದೆ ಇದೇ ಕಾರಣಕ್ಕಾಗಿ ಕುಲಸಚಿವರ ವಿರುದ್ಧ ದೌರ್ಜನ್ಯ ತಡೆ ಕಾಯ್ದೆಯಡಿಯಲ್ಲಿ ದೂರನ್ನು ದಾಖಲಿಸಿರುವುದನ್ನು ಕೂಡ ತೀವ್ರವಾಗಿ ಪರಿಗಣಿಸಿತು. ಸದರಿ ಸಿಬ್ಬಂದಿಯ ವರ್ತನೆಯು ಉದ್ದಟತನ ಹಾಗೂ ತೀವ್ರ ಅಶಿಸ್ತಿನಿಂದ ಕೂಡಿದ್ದು KCSR ಹಾಗೂ CCA ನಿಯಮಗಳ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವಾಗಿದೆ ಎಂದು ಅದು ಅಭಿಪ್ರಾಯಪಟ್ಟಿತು. ಈ ಕುರಿತು ಹಿರಿಯ ವಕೀಲರ ಅಭಿಪ್ರಾಯವನ್ನು ಪಡೆದು ಮುಂದಿನ ವಿಶೇಷ ಸಿಂಡಿಕೇಟ್ ಸಭೆಗೆ ಅದನ್ನು ಮಂಡಿಸಲು ಕುಲಸಚಿವರಿಗೆ ಸೂಚಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ 6:27(2017)

**ವಿಷಯ :** ವಿಶ್ವವಿದ್ಯಾನಿಲಯ ಅನುದಾನ ಆಯೋಗದ Open and Distance Learning Mode 2018–19ರಡಿ ಮಂಗಳೂರು ವಿಶ್ವವಿದ್ಯಾನಿಲಯವನ್ನು ಮಾನ್ಯತೆ ಮಾಡುವುದಕ್ಕೆ ಅರ್ಜಿ ಸಲ್ಲಿಸುವ ಸಂಬಂಧ Programme Project Report ಮತ್ತು Self learning materials ಗಳ ಅನುಮೋದನೆ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ವಿಷಯ :** ಆರ್ಥಿಕ ವರ್ಷ 2012–13 ರಿಂದ 2016–17ನೇ ಸಾಲಿನವರೆಗೆ ಸರಕಾರದಿಂದ ಬಿಡುಗಡೆಯಾದ SCP-TSP ಅನುದಾನದಲ್ಲಿ ಉಳಿಕೆಯಾದ ಅನುದಾನದಿಂದ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ/ಪಂಗಡದ ಸ್ನಾತಕೋತ್ತರ ಮತ್ತು ಸಂಶೋಧನಾ ವಿದ್ಯಾರ್ಥಿಗಳಿಗೆ ಒಟ್ಟು 350 ಲ್ಯಾಪ್‌ಟಾಪ್‌ಗಳನ್ನು ಖರೀದಿಸುವ ಪ್ರಕ್ರಿಯೆಗೆ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು. Networking Monitoring Tool ಗೆ ತಗಲುವ ರೂ.5,25,000/– ಇದನ್ನು ಸಾಮಾನ್ಯ ನಿಧಿಯಿಂದ ಭರಿಸಲು ನಿರ್ಧರಿಸಲಾಯಿತು.

ಮಾನ್ಯ ಕುಲಪತಿಯವರು ಸದಸ್ಯರುಗಳಿಗೆ ಧನ್ಯವಾದಗಳನ್ನರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| ಸಹಿ/– | ಸಹಿ/– |
| ಕುಲಸಚಿವರು | ಕುಲಪತಿಗಳು |